ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇದು calling attention ಮಾಡಿದ ಹಾಗೆ ಆಗುತ್ತಿದೆ.

ಅಧ್ಯಕ್ಷರು:– ಮಾನ್ಯ ತಿಮ್ಮರಾಯಪ್ಪನವರೆ, ಆಗಲ್ಲ ಬಿಡಿ, no ಚರ್ಚೆ, no discussion. ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಇನ್ನು ಏನಿದ್ದರೂ ಅವರ ಹತ್ತಿರ ಕುಳಿತು ಮಾತನಾಡಿ, ಸರಿಪಡಿಸುತ್ತಾರೆ. ಮಾನ್ಯ ಕುಮಾರಸ್ವಾಮಿಯವರೆ, ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇಲ್ಲ.

ಶ್ರೀ ಕೆ.ಎಂ. ತಿಮ್ಮರಾಯಪ್ಪ:– ಮಾನ್ಯ ಅಧ್ಯಕ್ಷರೆ, ನಾವು ಪಾವಗಡದಲ್ಲಿ ಜಾಗ ಕೊಡುತ್ತೇವೆ, ಅಲ್ಲೆ ಜಾಗ ಹುಡುಕಿದ್ದೇವೆ, ಅಲ್ಲೆ ಕೊಡುತ್ತೇವೆ. ದಯವಿಟ್ಟು ಅಲ್ಲೆ ಕಟ್ಟಡ ಮಾಡುವುದಕ್ಕೆ ತಾವು ಆದೇಶ ಕೊಡಿಸಿ.

ಅಧ್ಯಕ್ಷರು:– ಆಯಿತು, ಮಾನ್ಯ ಸಚಿವರೆ, ನೋಡಿ ಅವರನ್ನು ಕರೆದು ಮಾತನಾಡಿ.

3) ವಿಷಯ: ಕುಡಿಯುವ ನೀರಿನ ಯೋಜನೆ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರ ಸಕಲೇಶಪುರದಲ್ಲಿ ನೈಸರ್ಗಿಕವಾಗಿ ನೀರು ಸಿಗುತ್ತದೆ, ಅದರಡಿ ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆಯಲ್ಲಿ ಹನ್ನೆರಡೂವರೆ ಕೋಟಿ ರೂ.ಗಳಲ್ಲಿ 70 ಹಳ್ಳಿಗಳಿಗೆ ಅನುಕೂಲವಾಗುತ್ತದೆಂಬ ಅಂದಾಜು ಬಂದಿದೆ. ಇಲಾಖೆಯಲ್ಲಿ approve ಮಾಡಿ ಕೊಟ್ಟಿದ್ದಾರೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ:– ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಲ್ಲ, ಅಲ್ಲಿ ಕೆಲಸ stop ಮಾಡಿಸಬೇಕು. ಆ ಕಟ್ಟಡವನ್ನು ಎಲ್ಲೋ ಕಟ್ಟಿ ಬಿಟ್ಟರೆ ಮಕ್ಕಳಿಗೆ ತೊಂದರೆಯಾಗುತ್ತದೆ. ದಯವಿಟ್ಟು ಅದನ್ನು stop ಮಾಡಿಸಿ, ನಾವು ಎರಡು ಎಕರೆ ಜಾಗವನ್ನು ಕೊಡುಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇದನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನೀವೇ ಶಿಫಾರಸ್ಸು ಮಾಡಿದ್ದೀರಿ.

ಅಧ್ಯಕ್ಷರು:– ಮಾನ್ಯ ತಿಮ್ಮರಾಯಪ್ಪನವರೆ, ದಯವಿಟ್ಟು ಕುಳಿತುಕೊಳ್ಳುತ್ತಿರೋ, ಇಲ್ಲವೋ? ನಾನು ಬೇರೆ ಸದಸ್ಯರನ್ನು ಕರೆದು ಆಗಿದೆ, ಅವರಿಗೆ ಉತ್ತರ ಕೊಡುತ್ತಿದ್ದಾರೆ. ನೀವು ಮಾನ್ಯ ಮಂತ್ರಿಯವರ ಜೊತೆಗೆ ಕುಳಿತು ಮಾತನಾಡಿ. ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಕೇಳಿರುವ ಪ್ರಶ್ನೆ ಹನ್ನೇರಡು ಕೋಟಿ ರೂ.ಗಳ ಅಂದಾಜು ವೆಚ್ಚವಿರುವುದರಿಂದ ಸಂಬಂಧಪಟ್ಟ ಸಚಿವರಿಂದಲೇ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ಕೃಷ್ಣಪ್ಪನವರು ಇಲ್ಲ. ಮಾನ್ಯ ಎಂ.ಟಿ.ಬಿ. ನಾಗರಾಜ್‌ರವರೆ, ಹೇಳಿ.

4) ವಿಷಯ: ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ

ಶ್ರೀ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ):– ಮಾನ್ಯ ಅಧ್ಯಕ್ಷರೆ, ನಮ್ಮ ಹೊಸಕೋಟೆ ತಾಲ್ಲೂಕಿನ ನಂದವಳ್ಳಿ ಹೋಬಳಿ, ಶಾಂತನಪುರ ಸರ್ವೆ ನಂ:9ರ ಬಗ್ಗೆ ಸದನದಲ್ಲಿ ನಾನು ಎರಡು ಬಾರಿ ಪ್ರಶ್ನೆ ಮಾಡಿದ್ದೇನೆ. ಈಗಾಗಲೇ ರೆವಿನ್ಯೂ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕೂಡ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಹೇಳಿ 4 ತಿಂಗಳುಗಳಾಯಿತು. ಇದುವರೆಗೂ ಅವರ ಮೇಲೆ ಯಾವುದೇ ಶಿಸ್ತಿನ ಕ್ರಮ ಜರುಗಿಸಿಲ್ಲ. ಜಿಲ್ಲಾಧಿಕಾರಿಯವರಿಗೆ 263 ಎಕರೆಯನ್ನು 163(9)ನಲ್ಲಿ ಸರ್ಕಾರಕ್ಕೆ ತೆಗೆದುಕೊಳ್ಳಿ ಎಂದು ಆದೇಶ ಬಂದಿದೆ. ಆ ಆದೇಶ ಬಂದಿದ್ದರೂ ಇದುವರೆಗೂ ನಮ್ಮ ಕಂದಾಯ ಸಚಿವರು ಅಧಿಕಾರಿಗಳ ಮೇಲೆ ಯಾವುದೇ ಶಿಸ್ತಿನ ಕ್ರಮ ಜರುಗಿಸಿಲ್ಲ.

ಅಧ್ಯಕ್ಷರು:– ಮಾನ್ಯ ಕಂದಾಯ ಸಚಿವರೆ ಉತ್ತರ ಹೇಳಿ.